# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 293 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 31.05.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 293 • PRGI No:KARKAN/2023/88055 • VIJAYANAGARA • 31.05.2025 • Saturday • Page:04 • Rs:2



HAMPI TIMES
PRINT & DIGITAL
Daily NEWS PAPER
To book Classified Display Ad in HAMPI TIMES Please call on
9448633038
Bring your product to local hearts




ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಮಧು ಬಂಗಾರಪ್ಪ
ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಕರ್ನಾಟಕ ಸರ್ಕಾರ

# ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಉಚಿತ ದಾಖಲಾತಿ

## FREE ADMISSION

**ಕಲಿಕಾ ಚಿಲುಮೆ, ಗಣಿತ ಗಣಕ, ಓದು ಕರ್ನಾಟಕ, ಕಲಿಕಾ ದೀಪ, ಜ್ಞಾನ ಸೇತು, ವಿದ್ಯಾ ವಿಜೇತ ಮೊದಲಾದ ಕಾರ್ಯಕ್ರಮಗಳ ಮೂಲಕ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ.**

- ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಉಚಿತ ಶೂ- ಸಾಕ್ಸ್ ಸೌಲಭ್ಯ.
- ಮಧ್ಯಾಹ್ನದ ಬಿಸಿಯೂಟ ಯೋಜನೆ.
- ಪೂರಕ ಪೌಷ್ಟಿಕ ಆಹಾರ-ಆರುದಿನ ಮೊಟ್ಟೆ ವಿತರಣೆ ಹಾಗೂ ರಾಗಿಮಾಲ್ಟ್ ವಿತರಣೆ.
- ಕೆ.ಪಿ.ಎಸ್ ಶಾಲೆಗಳಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ.
- 1 ರಿಂದ 5ನೇಯ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಇಂಗ್ಲಿಷ್ ಭಾಷೆಯಲ್ಲಿ ದ್ವಿ-ಭಾಷಾ ಮಾಧ್ಯಮ ತರಗತಿಗಳ ಕಲಿಕೆ.
- ಮರುಸಿಂಚನ 6 ರಿಂದ 10ನೇಯ ತರಗತಿಯ ವಿದ್ಯಾರ್ಥಿಗಳಿಗೆ.
- ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ 'ಅಕ್ಷರ ಆವಿಷ್ಕಾರ' ಎನ್ನುವ ಸಮಗ್ರ ಶಾಲಾ ಅಭಿವೃದ್ಧಿ ಯೋಜನೆ, ಈ ಯೋಜನೆಗಾಗಿ ಶಿಕ್ಷಣ ಇಲಾಖೆಗೆ ಮೀಸಲಿಟ್ಟ ಅನುದಾನದಲ್ಲಿ ಶೇ. 25 ರಷ್ಟು ಅನುದಾನ ಬಳಕೆ.
- ವಾರದಲ್ಲಿ ಒಂದು ಬಾರಿ ಕಬ್ಬಿಣಾಂಶದ ಮಾತ್ರೆ ಹಾಗೂ 6 ತಿಂಗಳಿಗೊಮ್ಮೆ ಜಂತುಹುಳ ನಿವಾರಣೆ ಮಾತ್ರೆ ವಿತರಣೆ.
- ಆರೋಗ್ಯ ಇಲಾಖೆಯಿಂದ ಮಕ್ಕಳ ಆರೋಗ್ಯ ತಪಾಸಣೆ.
- ಪೊಲೀಸ್ ಇಲಾಖೆಯಿಂದ ಮಕ್ಕಳ ಸುರಕ್ಷತೆ, ಭದ್ರತೆ ಹಾಗೂ ಸೈಬರ್ ಕ್ರೈಂ ಬಗ್ಗೆ ಅರಿವು ಮೂಡಿಸುವಿಕೆ.
- ಉಚಿತ ವಿದ್ಯುತ್ ಹಾಗೂ ಕುಡಿಯುವ ನೀರಿನ ಸೌಲಭ್ಯ.
- ಸುಸಜ್ಜಿತ ಪ್ರಯೋಗಾಲಯ ಹಾಗೂ ಗ್ರಂಥಾಲಯಗಳ ಲಭ್ಯತೆ.
- ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸರ್ವತೋಮುಖ ಬೆಳವಣಿಗೆ.
- ವಿದ್ಯಾರ್ಥಿವೇತನ ಹಾಗೂ ವಿಕಲಚೇತನರಿಗೆ ವಿಶೇಷ ಸೌಲಭ್ಯಗಳು.
- 2025 ರ ಮಾರ್ಚ್ ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಯಲ್ಲಿ ಪರಿಕ್ಷೆ ಯಲ್ಲಿ ಶಗುಪ್ತಾ ಅಂಜುಮ್, GUHS ಶಿರಸಿ ಹಾಗೂ ರೂಪಾ ಚೆನ್ನಗೌಡ ಪಾಟೀಲ್, GHS ದೇವಲಾಪೂರ, ಬೈಲಹೊಂಗಲ, ಬೆಳಗಾವಿ ಇವರಿಂದ ಅಮೋಘ ಸಾಧನೆ. 625/625 ಅಂಕಗಳು.











**ಪ್ರತಿಭಾವಂತ ತರಬೇತಿ ಪಡೆದ ಶಿಕ್ಷಕರಿಂದ ಬೋಧನೆ. ಪೋಷಕರಿಗೆ ಶೂನ್ಯ ಆರ್ಥಿಕ ಹೊರೆ.**

**"ಗುಣಮಟ್ಟದ ಶಿಕ್ಷಣ ಹಾಗೂ ಮೌಲ್ಯ ಶಿಕ್ಷಣವೇ ನಮ್ಮ ಗುರಿ"**

## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಮಕ್ಕಳ ಜೀವ ಅಮೂಲ್ಯ, ಅವರ ಸುರಕ್ಷತೆ ಎಲ್ಲರ ಆದ್ಯ ಕರ್ತವ್ಯ


ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಬೈಕ್, ಆಟೋ, ಸಾರ್ವಜನಿಕ ಸಾರಿಗೆ, ಶಾಲಾ ಬಸ್‌ಗಳು ಸೇರಿದಂತೆ ವಿವಿಧ ವಾಹನಗಳನ್ನು ಅವಲಂಬಿಸಿದ್ದಾರೆ. ಈ ವಾಹನಗಳು ರಸ್ತೆಗಳಲ್ಲಿನ ಗುಂಡಿಗಳಿಂದಾಗಿ ಅಪಘಾತಕ್ಕೀಡಾಗುವ ಸಂಭವ ಹೆಚ್ಚಿದೆ. ಈಗಾಗಲೇ ಹಲವಾರು ಸಣ್ಣಪುಟ್ಟ ಅಪಘಾತಗಳು ಸಂಭವಿಸಿದ್ದು, ಕೆಲವು ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿರುವ ವರದಿಗಳಿವೆ. ಮಳೆಯ ದಿನಗಳಲ್ಲಿ ಈ ಗುಂಡಿಗಳು ನೀರಿನಿಂದ ತುಂಬಿ, ಅವುಗಳ ಆಳವನ್ನು ಅಂದಾಜಿಸುವುದು ಕಷ್ಟವಾಗಿ, ಮತ್ತಷ್ಟು ಅಪಾಯಕ್ಕೆ ಆಹ್ವಾನ ನೀಡುತ್ತವೆ. ಮಕ್ಕಳ ಜೀವ ಅಮೂಲ್ಯ. ಅವರ ಸುರಕ್ಷತೆ ನಮ್ಮೆಲ್ಲರ ಆದ್ಯ ಕರ್ತವ್ಯ.

ತಕ್ಷಣದ ಕ್ರಮ ಅತ್ಯಗತ್ಯ : ಸಂಬಂಧಿಸಿದ ಲೋಕೋಪಯೋಗಿ ಇಲಾಖೆ, ಸ್ಥಳೀಯ ಸಂಸ್ಥೆಗಳು, ಮತ್ತು ಆಡಳಿತ ಮಂಡಳಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ರಸ್ತೆ ಗುಂಡಿಗಳನ್ನು ಮುಚ್ಚಲು ಯುದ್ಧಕಾಲೀನ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು. ರಸ್ತೆಗಳ ದುರಸ್ತಿ ಕಾರ್ಯವನ್ನು ಕೇವಲ ತೋರಿಕೆಗೆ ಮಾಡದೆ, ಗುಣಮಟ್ಟದ ಕಾಮಗಾರಿ ನಡೆಸಿ, ಭವಿಷ್ಯದಲ್ಲಿ ಗುಂಡಿಗಳು ಮತ್ತೆ ಏಳದಂತೆ ಎಚ್ಚರ ವಹಿಸಬೇಕು. ಹೆಚ್ಚು ವಾಹನ ಸಂಚಾರವಿರುವ ಮತ್ತು ಶಾಲಾ–ಕಾಲೇಜುಗಳಿಗೆ ಸಮೀಪವಿರುವ ರಸ್ತೆಗಳಿಗೆ ಆದ್ಯತೆ ನೀಡಬೇಕು. ಸಾರ್ವಜನಿಕರು ಸಹ ರಸ್ತೆ ಗುಂಡಿಗಳ ಬಗ್ಗೆ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿ ನೀಡಬೇಕು.

ನೆನಪಿರಲಿ, ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು. ಅವರ ಭವಿಷ್ಯವನ್ನು ರೂಪಿಸುವಲ್ಲಿ ಅವರ ಸುರಕ್ಷಿತ ಪ್ರಯಾಣವೂ ಒಂದು ಭಾಗ. ರಸ್ತೆ ಗುಂಡಿಗಳಿಂದಾಗುವ ಪ್ರಾಣಾಪಾಯವನ್ನು ತಡೆಯಲು ಸಂಬಂಧಿಸಿದ ಇಲಾಖೆಗಳು ತಕ್ಷಣವೇ ಮುಂದಾಗಬೇಕು. ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ತೋರಿದರೆ, ಅದು ಮಕ್ಕಳ ಭವಿಷ್ಯಕ್ಕೆ ಕೊಳ್ಳಿ ಇಟ್ಟಂತೆ.

## ಸಾಹಿತಿ ಹೆಚ್.ಎಸ್.ವೆಂಕಟೇಶಮೂರ್ತಿ ಅವರ ನಿಧನಕ್ಕೆ ಕನ್ನಡ ವಿಶ್ವವಿದ್ಯಾಲಯ ಸಂತಾಪ

■ ಹಂಪಿ ಟೈಮ್ಸ್ ಹೊಸಪೇಟೆ



ಕನ್ನಡದ ಖ್ಯಾತ ಸಾಹಿತಿ, ಕವಿ, ನಾಟಕ ರಚನೆಕಾರರೂ, ತಮ್ಮ ಭಾವಗೀತೆಗಳ ಮೂಲಕ ಜನಮನದಲ್ಲಿ ಹೆಸರಾಗಿದ್ದ ಹೆಚ್.ಎಸ್. ವೆಂಕಟೇಶಮೂರ್ತಿ ಅವರ ನಿಧನಕ್ಕೆ ಕನ್ನಡ ವಿಶ್ವವಿದ್ಯಾಲಯವು ಸಂತಾಪ ಸೂಚಿಸಿದೆ.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಂತಾಪ ಸೂಚಕ ಸಭೆಯಲ್ಲಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ, ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ, ಎಲ್ಲ ನಿಕಾಯಗಳ ಡೀನರು, ನಿರ್ದೇಶಕರು, ಪ್ರಾಧ್ಯಾಪಕರು, ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಪಾಲ್ಗೊಂಡು ಮೌನ ಆಚರಿಸಿ ಸಂತಾಪ ಸೂಚಿಸಿದರು.

## ನಿಮ್ಮ ಬೆಂಬಲವೇ ನಮ್ಮ ಬಲ

ಸ್ಥಳೀಯ ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆ ಮತ್ತಷ್ಟು ಅಭಿವೃದ್ಧಿಪಡಿಸಲು ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ, ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಯೇ ನಮ್ಮ ಧ್ಯೇಯ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು ಹಾಗೆಯೇ ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ಪ್ರತಿ ಸುದ್ದಿಯ ಹಿಂದೆ ಯೋಗ್ಯ ಶ್ರಮವಿದೆ. ಪತ್ರಿಕೆ ಕೊಂಡು ಓದಿ, ಆ ಶ್ರಮವನ್ನು ಗೌರವಿಸಿ!

ಹಂಪಿ ಟೈಮ್ಸ್, ಹೊಸಪೇಟೆ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಸೌರವ್ಯೂಹದಲ್ಲಿ ಇನ್ನೊಂದು ಸೂರ್ಯ ಇದ್ದಿದ್ದರೆ



ನಮ್ಮ ಬ್ರಹ್ಮಾಂಡದಲ್ಲಿ ಸಾವಿರಾರು ಸೌರವ್ಯೂಹಗಳಿವೆ. ಪ್ರತಿ ಸೌರವ್ಯೂಹಕ್ಕೆ ಒಂದೊಂದು ನಕ್ಷತ್ರ ಅಧಿಪತಿಯಾಗಿದೆ. ಹಾಗೆಯೇ ಪ್ರತಿ ಸೌರವ್ಯೂಹದಲ್ಲಿ ಗ್ರಹಗಳು, ಉಪಗ್ರಹಗಳು, ಕ್ಷುದ್ರಗ್ರಹಗಳು, ಧೂಮಕೇತುಗಳು ಇವೆ. ಗ್ರಹ ಮತ್ತು ಉಪಗ್ರಹಗಳು ನಿಯಮಿತ ಕಕ್ಷೆಯಲ್ಲಿ ಚಲಿಸುತ್ತವೆ. ಆದರೆ ಧೂಮಕೇತುಗಳಿಗೆ ನಿಯಮಿತ ಚಲನಾ ಕಕ್ಷೆ ಇಲ್ಲ.

ನಮ್ಮ ಸೌರವ್ಯೂಹಕ್ಕೆ ಸೂರ್ಯನೇ ಅಧಿಪತಿ. ಪ್ರಸ್ತುತ ನಮ್ಮ ಸೌರವ್ಯೂಹದಲ್ಲಿ ಎಂಟು ಗ್ರಹಗಳು, 205 ಉಪಗ್ರಹಗಳು, ಧೂಮಕೇತುಗಳು ಹಾಗೂ ಕ್ಷುದ್ರಗ್ರಹಗಳು ಇವೆ. ಬ್ರಹ್ಮಾಂಡದಲ್ಲಿನ ಊರ್ಟ್ ಮೋಡಗಳು ಹೊಸ ಹೊಸ ನಕ್ಷತ್ರಗಳನ್ನು ಹೊರಹಾಕುತ್ತಲೇ ಇರುತ್ತವೆ. ಹೀಗೆ ಹೊರಬಂದ ನಕ್ಷತ್ರಗಳು ತಮ್ಮದೇ ಆದ ಹೊಸ ಸೌರವ್ಯೂಹವನ್ನು ನಿರ್ಮಿಸಿಕೊಳ್ಳುತ್ತಲೇ ಇವೆ. ಹೀಗೆ ರೂಗೊಂಡ ಹೊಸ ನಕ್ಷತ್ರವು ನಮ್ಮ ಸೌರವ್ಯೂಹವನ್ನು ಪ್ರವೇಶಿಸಿದರೆ ಏನಾಗುತ್ತೆ? ಎಂಬ ಪ್ರಶ್ನೆ ಮೂಡದೇ ಇರದು. ಒಂದು ವೇಳೆ ಇನ್ನೊಂದು ನಕ್ಷತ್ರ ಅಥವಾ ಸೂರ್ಯ ನಮ್ಮ ಸೌರವ್ಯೂಹವನ್ನು ಪ್ರವೇಶಿದರೆ ಏನೇನು ಬದಲಾವಣೆಗಳು ಆಗುತ್ತವೆ? ಗ್ರಹಗಳ ಚಲನೆಯ ಮೇಲೆ ಹೊಸ ಸೂರ್ಯನು ಪ್ರಭಾವ ಬೀರುವನೇ? ಅಥವಾ ಅವನೂ ನಮ್ಮೊಳಗೊಬ್ಬನಾಗುವನೇ? ಎಂದು ತಿಳಿಯುವ ಕಾತುರತೆ ಮೂಡುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಇನ್ನೊಬ್ಬ ಸೂರ್ಯ ನಮ್ಮ ಸೌರವ್ಯೂಹ ಪ್ರವೇಶಿಸಿದರೆ ಏನಾಗುತ್ತದೆ? ಎಂಬುದರ ಕುರಿತು ಚರ್ಚಿಸೋಣ.

ಒಂದು ಲೆಕ್ಕಾಚಾರದ ಪ್ರಕಾರ 40 ಸಾವಿರ ನಕ್ಷತ್ರಗಳು ಊರ್ಟ್ ಮೋಡಗಳಿಂದ ಹೊರಟಿವೆ ಎಂದು ಅಂದಾಜಿಸಲಾಗಿದೆ. ಆದರೆ ಇವರಲ್ಲವೂ ಭೂಮಿಗೆ ಬರದೆ ಇರಬಹುದು. ಕೆಲವಾದರೂ ಬರುತ್ತವೆ. ಈಗ್ಗೆ 70,000 ವರ್ಷಗಳ ಹಿಂದೆ ಸ್ಕೋಲ್ಜ್ ಎಂದು ಕರೆಯುವ ಕೆಂಪು ದೈತ್ಯ ನಕ್ಷತ್ರವೊಂದು ಊರ್ಟ್ ಮೋಡಗಳಿಂದ ನಮ್ಮ ಸೌರವ್ಯೂಹದ ಕಡೆ ಹೊರಟಿತ್ತು. ಇದು ಸೂರ್ಯನಿಂದ ಕೇವಲ 0.8 ಬೆಳಕಿನ ವರ್ಷಗಳ ದೂರದಲ್ಲಿತ್ತು. ಆದರೆ ಕಾರಣಾಂತರಗಳಿಂದ ಸ್ಕೋಲ್ಜ ತನ್ನ ಪಥವನ್ನು ಬದಲಿಸಿ ಸೂರ್ಯನ ವಇರುದ್ದ ದಿಕ್ಕಿಗೆ ಸಾಗಿತು. ಇದರಿಂದ ನಮ್ಮ ಸೌರವ್ಯೂಹಕ್ಕೆ ಆಗಮಿಸಬೇಕಾಗಿದ್ದ ಆಗಂತುಕ ನಕ್ಷತ್ರವೊಂದು ದೂರ ಸರಿದು ಆಗುವ ಅನಾಹುತಗಳನ್ನು ತಪ್ಪಿಸಿತು. ಇದೀಗ ಇನ್ನೊಂದು ದೈತ್ಯ ನಕ್ಷತ್ರ ನಮ್ಮ ಸೌರವ್ಯೂಹದತ್ತ ಚಲಿಸುತ್ತಿದೆ. ನಮ್ಮ ಸೂರ್ಯನ 60% ದ್ರವ್ಯರಾಶಿ ಹೊಂದಿದ ಗ್ಲೈಸಿ710 ಹೆಸರಿನ ನಕ್ಷತ್ರವು ಗಂಟೆಗೆ 52000ಕಿ.ಮೀ ವೇಗದಲ್ಲಿ ಪ್ರಯಾಣಿಸುತ್ತಿದೆ. ಈ ಆಕ್ರಮಣಕಾರಿ ನಕ್ಷತ್ರವು ನಮ್ಮ ಸೌರವ್ಯೂಹಕ್ಕೆ ಕಾಲಿಡಲು ಎಷ್ಟು ಸಮಯ ಬೇಕಾಗುತ್ತದೆ ಮತ್ತು ಅದರಿಂದಾಗುವ ತೊಂದರೆಗಳೇನು? ಎಂಬುದನ್ನು ಕುರಿತು ಚರ್ಚಿಸುವುದು ತುಂಬಾ ಮುಖ್ಯ.

ನಮ್ಮ ಸೌರವ್ಯೂಹಕ್ಕೆ ಆಗಮಿಸುವ ಆಗಂತುಕ ನಕ್ಷತ್ರವು ಏನೇನು ತೊಂದರೆ ಮಾಡುತ್ತದೆ ಎಂಬುದು ಆ ನಕ್ಷತ್ರದ ಗಾತ್ರ ಮತ್ತು ಅದರ ಪಥವನ್ನು ಅವಲಂಬಿಸಿದೆ. ಸ್ಕೋಲ್ಜ್ ನಕ್ಷತ್ರವು ಊರ್ಟ್ ಮೋಡದಿಂದ ಹೊರಟು ಪ್ರಾಕ್ಸಿಮಾ ಸೆಂಟರಿಗಿಂತ ಐದು ಪಟ್ಟು ಸಮೀಪದಲ್ಲಿ ಬಂದು ಹೋಗಿತ್ತು. ಹಾಗಾಗಿ ಅದು ಭೂಮಿಯ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಅದು ಬಂದು ಹೋದ ಕಾಲಕ್ಕೆ ಭೂಮಿಯ ಮೇಲೆ ಆರಂಭಿಕ ಮಾನವರು ಬೃಹತ್ ಜ್ವಾಲಾಮುಖಿ ಸ್ಫೋಟದಿಂದ ನಾಶವಾಗಿದ್ದರು. ಇದು ಕಾಕತಾಳೀಯ ಎಂಬಂತೆ ಸ್ಕೋಲ್ಜ್ ನಕ್ಷತ್ರದ ಪ್ರಭಾವದಿಂ ಹೀಗಾಯಿತು ಎಂಬ ಕೂಗು ಕೇಳಿಬಂದಿತ್ತು. ಸ್ಕೋಲ್ಜ್ ನಕ್ಷತ್ರವು ಮಾನವರ ಮೇಲೆ ಯಾವುದೇ ಪ್ರಭಾವ ಬೀರದಿದ್ದರೂ ಶೇ.10 ರಷ್ಟು ಧೂಮಕೇತುಗಳು ಮತ್ತು ಕ್ಷುದ್ರಗ್ರಹಗಳ ಕಕ್ಷೆಗಳನ್ನು ಬದಲಾಯಿಸಿತ್ತು.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಪ್ರಸ್ತುತ ನಮ್ಮ ಸೌರವ್ಯೂಹದೆಡೆಗೆ ಆಗಮಿಸುತ್ತಿರುವ ಗ್ಲೈಸಿ710 ನಕ್ಷತ್ರವು ಸ್ಕೋಲ್ಜ್‌ಗಿಂತ ಗಾತ್ರದಲ್ಲಿ ದೊಡ್ಡದಿದೆ. ಗ್ಲೈಸಿ710 ಚಲಿಸುತ್ತಿರುವ ವೇಗಕ್ಕೆ ಅನುಸಾರವಾಗಿ ಲೆಕ್ಕಾಚಾರ ಹಾಕಿದರೆ ಅದು ನಮ್ಮ ಸೌರವ್ಯೂಹದ ಅಂಚನ್ನು ತಲುಪಲು ಇನ್ನೂ 1.29 ದಶಲಕ್ಷ ವರ್ಷಗಳು ಬೇಕಾಗುತ್ತದೆ. ಅದು ನಮ್ಮ ಸೌರವ್ಯೂಹದ ಸಂಪರ್ಕ ಪಡೆದ ಕೂಡಲೇ ಭೂಮಿಯನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಬಹುದೆಂಬ ಶಂಕೆ ಇದೆ.

ಒಂದು ಅಂದಾಜಿನಂತೆ ಪ್ರತಿದಿನ ಸುಮಾರು 170 ಉಲ್ಕೆಗಳು, ದೂಮಕೇತುಗಳು ಮತ್ತು ಕ್ಷುದ್ರಗ್ರಹಗಳು ಭೂಮಿಗೆ ಬರುತ್ತವೆ. ಆದರೆ ಬಹುತೇಕವಾಗಿ ಇವುಗಳ ಗಾತ್ರ ಮತ್ತು ಪರಿಣಾಮಗಳು ಅಲ್ಪ ಪ್ರಮಾಣದಲ್ಲಿರುವುದರಿಂದ ದೊಡ್ಡ ವಿಷಯವಾಗಿ ತೋರುತ್ತಿಲ್ಲ. ಕೆಲವು ವೇಳೆ ಅವು ಜನಸಂಖ್ಯೆ ಇಲ್ಲದ ಪ್ರದೇಶದಲ್ಲಿ ಬೀಳುವುದರಿಂದಲೂ ಅವುಗಳ ಪ್ರಭಾವ ತಿಳಿಯುತ್ತಿಲ್ಲ. 1908ರಲ್ಲಿ ಸೈಬೀರಿಯಾದಲ್ಲಿ ಬಿದ್ದ ಕ್ಷುದ್ರಗ್ರಹವನ್ನು 80 ಸಾವಿರ ಮರಗಳ ನಾಶಕ್ಕೆ ಕಾರಣವಾಗಿತ್ತು. ಸುಮಾರು 60 ಕಿ.ಮೀ ವಿಸ್ತಾರದ ಪ್ರದೇಶದಲ್ಲಿ ದೊಡ್ಡದಾದ ಕಂದಕವನ್ನು ಉಂಟುಮಾಡಿತ್ತು. ಒಂದುವೇಳೆ ಇದೇ ಕ್ಷುದ್ರಗ್ರಹವು ನ್ಯೂಯಾರ್ಕ್ ನಗರದ ಮೇಲೆ ಬಿದ್ದಿದ್ದರೆ ಇಡೀ ನಗರವನ್ನು ಅಲ್ಲೋಲಕಲ್ಲೋಲ ಮಾಡಿಬಿಡುತ್ತಿತ್ತು. ಗಾತ್ರದಲ್ಲಿ ಸೂರ್ಯನಿಗಿಂತ ಚಿಕ್ಕದಾದ ನಕ್ಷತ್ರವೇ ಇಷೊಂಡು ಪ್ರಭಾವ ಬೀರುವುದಾದರೆ ಸೂರ್ಯನ ಗಾತ್ರದ ನಕ್ಷತ್ರದ ಪ್ರಭಾವ ಎಷ್ಟಿರಬಹುದೆಂದು ಅಂದಾಜಿಸಬಹುದು.

ಸೂರ್ಯನಿಗಿಂತ ದೊಡ್ಡದಾದ ನಕ್ಷತ್ರವು ಊರ್ಟ್ ಮೋಡ ದಾಟಿ ನಮ್ಮ ಸೌರವ್ಯೂಹ ಪ್ರವೇಶಿಸಿದರೆ ಪ್ರತಿಯೊಂದು ಗ್ರಹದ ಕಕ್ಷೀಯ ಪಥದ ಪ್ರಭಾವ ಬೀರುತ್ತದೆ. ಇದು ಕೇವಲ ಒಮ್ಮೆ ಮಾತ್ರ ಸಂಭವಿಸಿ ಮರೆಯಾಗುವ ಪ್ರಕ್ರಿಯೆ ಅಲ್ಲ. ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಈ ಅಡ್ಡಿ ಸಂಭವಿಸುತ್ತಲೇ ಇರುತ್ತದೆ. ಗ್ರಹಗಳ ಕಕ್ಷಾ ಪಥ ಬದಲಾದರೆ ಆಂತರಿಕ ಮತ್ತು ಬಾಹ್ಯದ ಬೃಹತ್ ಘರ್ಷಣೆಯಿಂದ ಏರಿಳಿತದ ಪರಿಣಾಮಗಳು ಗ್ರಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಭೂಮಿಯ ಮೇಲೆ ಬೀಳುವ ಉಲ್ಕೆಗಳು ಘರ್ಷಣೆಯ ಪರಿಣಾಮವಾಗಿ ಬಿರುಗಾಳಿ ಸೃಷ್ಟಿಸಬಹುದು.

ಸೌರಮಂಡಲಕ್ಕೆ ಇನ್ನೊಂದು ನಕ್ಷತ್ರ ಪ್ರವೇಶಿಸಿದರೆ ಭೂಮಿ ಮತ್ತು ಅದರ ನೆರೆಯ ಗ್ರಹಗಳು ಕಾಸ್ಮಿಕ್ ಘಟನೆಗಳನ್ನು ಅನುಭವಿಸುವಂತಾಗುತ್ತದೆ. ಅದು ಭೂಮಿಯ ಸಂಪೂರ್ಣ ನಾಶಕ್ಕೂ ಕಾರಣವಾಗಬಹುದು. ನಮ್ಮ ಸೌರವ್ಯೂಹದ ಗ್ರಹಗಳೆಲ್ಲವೂ ಸೂರ್ಯ ಕೇಂದ್ರಿತವಾಗಿದ್ದು, ಸೂರ್ಯನ ಗುರುತ್ವಕ್ಕೆ ಅನುಗುಣವಾಗಿ ನಿರ್ದಿಷ್ಟ ಕಕ್ಷೆಯಲ್ಲಿ ಚಲಿಸುತ್ತಿವೆ. ಆದರೆ ಇನ್ನೊಂದು ಸೂರ್ಯ/ನಕ್ಷತ್ರ ಸೌರವ್ಯೂಹ ಪ್ರವೇಶಿಸಿದರೆ ಗ್ರಹಗಳ ಕಕ್ಷಾ ಪಥ ಬದಲಾಗುತ್ತದೆ ಮತ್ತು ಆಕಾಶಕಾಯಗಳು ಪರಸ್ಪರ ಮುಖಾಮುಖಿಯಾಗಿ ಸ್ಫೋಟಗೊಳ್ಳುತ್ತವೆ. ಇನ್ನೊಂದು ನಕ್ಷತ್ರ ಸೌರವ್ಯೂಹ ಪ್ರವೇಶಿಸಿದರೆ ಧೂಮಕೇತು ಮತ್ತು ಕ್ಷುದ್ರಗ್ರಹಗಳು ಹೆಚ್ಚು ಹೆಚ್ಚು ಸಕ್ರಿಯಗೊಂಡು ಭುಮಿಗೆ ಅಪ್ಪಳಿಸುತ್ತವೆ. ಪ್ರತಿದಿನ ಭೂಮಿಗೆ ಬರುವ ಉಲ್ಕೆ, ಕ್ಷುದ್ರಗ್ರಹಗಳು ಮತ್ತು ಧೂಮಕೇತುಗಳ ಸಂಖ್ಯೆ ಹೆಚ್ಚುತ್ತದೆ. ಇವುಗಳಿಂದ ಭೂಮಿ ಮತ್ತು ಇನ್ನಿತರೇ ಗ್ರಹಗಳು ಪರಸ್ಪರ ಅಪಾಯಕ್ಕೆ ಒಳಗಾಗುತ್ತವೆ.

ಇನ್ನೊಂದು ಸೂರ್ಯ ಸೌರವ್ಯೂಹ ಪ್ರವೇಶಿಸದರೆ ಈಗಿನ ಗ್ರಹಗಳೆಲ್ಲವೂ ಹೊಸ ಸೂರ್ಯನ ಸುತ್ತ ಸುತ್ತಬಹುದು ಅಥವಾ ಪರಸ್ಪರ ಒಂದಕ್ಕೊಂದು ಡಿಕ್ಕಿ ಹೊಡೆಯಬಹುದು. ಹೊಸ ನಕ್ಷತ್ರದೊಂದಿಗೆ ಹೊಸ ಗ್ರಹಗಳೂ ನಮ್ಮ ಸೌರವ್ಯೂಹವನ್ನು ಪ್ರವೇಶಿಸಬಹುದು. ಆಗ ಗ್ರಹಗಳ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತವೆ. ಗ್ರಹಗಳು ಉಪಗ್ರಹಗಳಾಗುವ ಹಾಗೂ ಉಪಗ್ರಹಗಳು ಗ್ರಹಗಳಾಗುವ ಅವಕಾಶಗಳೂ ಇವೆ. ಹೊಸ ನಕ್ಷತ್ರವು ಈಗಿನ ಎಲ್ಲಾ ಗ್ರಹಗಳನ್ನು ತನ್ನ ಎಳೆತಕ್ಕೆ ಒಳಪಡಿಸಿಕೊಳ್ಳಬಹುದು.

ನೆಮೆಸಿಸ್ ಸಿದ್ಧಾಂತ ಹಾಗೂ ಇನ್ನೊಂದು ಸೂರ್ಯ : ನೆಮೆಸಿಸ್ ಸಿದ್ಧಾಂತದ ಪ್ರಕಾರ ನಮ್ಮ ಸೌರವ್ಯೂಹಕ್ಕೆ ಇನ್ನೊಂದು ಸೂರ್ಯ ಭೇಟಿಕೊಡುತ್ತಾನೆ. ನೆಮೆಸಿಸ್ ಎಂಬ ಪದವು ಗ್ರೀಕ್ ದೇವತೆಯ ಹೆಸರಿನ ಕುಬ್ಜ ನಕ್ಷತ್ರವಾಗಿದೆ. ಇದರ ಅರ್ಥ ಅವನತಿ ಅಥವಾ ಹಾಳಾಗುವುದನ್ನು ಅರ್ಥೈಸುತ್ತದೆ. ನೆಮೆಸಿಸ್ ಸಿದ್ಧಾಂತದ ಪ್ರಕಾರ ಒಂದು ದಿನ ನಮ್ಮ ಸೌರವ್ಯೂಹ ಅಳಿಸಿಹೋಗುತ್ತದೆ. ಪ್ರತಿ ಇಪ್ಪತ್ತಾರು ದಶಲಕ್ಷ ವರ್ಷಗಳಿಗೊಮ್ಮೆ ಭೂಮಿಗೆ ಸ್ವಲ್ಪ ಸಮಸ್ಯೆ ಇರುತ್ತದೆ. ಆಗ ಕೆಲವು ಭಯಾನಕ ಹಾಗೂ ಸಾಮೂಹಿಕ ದುರಂತಗಳು ಸಂಭವಿಸುತ್ತವೆ. ಆಗ ಗ್ರಹಗಳಲ್ಲಿನ ಬಹುತೇಕ ಜೀವಿಗಳು ನಾಶ ಹೊಂದುತ್ತವೆ ಮತ್ತು ಪ್ರಕೃತಿಯು ತನ್ನ ಸಮತೋಲವನ್ನು ಕಾಯ್ದುಕೊಳ್ಳುತ್ತದೆ ಇದು ಅರವತ್ತೈದು ದಶಲಕ್ಷ ವರ್ಷಗಳ ಹಿಂದೆ ಡೈನೋಸಾರ್‌ಗಳ ಸಾವಿಗೆ ಕಾರಣವಾಗಿತ್ತು.

ನಮ್ಮ ಸೂರ್ಯನಿಗೆ ನೆಮೆಸಿಸ್ ಎಂಬ ಪುಟ್ಟ ದುಷ್ಟ ಸಹೋದರನಿದ್ದಾನೆ. ಅವನು ಬಹಳ ದೂರದಲ್ಲಿದ್ದು, ಪ್ರತಿ ಇಪ್ಪತ್ತಾರು ವರ್ಷಗಳಿಗೊಮ್ಮೆ ಸೌರವ್ಯೂಹದ ಸಮೀಪಕ್ಕೆ ಬರುತ್ತಾನೆ. ಅವನು ಬಂದಾಗಲೆಲ್ಲಾ ಸೌರವ್ಯೂಹದ ಗ್ರಹಗಳ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತಾನೆ ಎನ್ನುತ್ತಾರೆ ಕೆಲ ಖಗೋಳಶಾಸ್ತ್ರಜ್ಞರು. ಅವನು ಊರ್ಟ್ ಮೋಡದಿಂದ ಬಂದಾಗಲೆಲ್ಲಾ ಧೂಮಕೇತುಗಳ ಚಲನೆಯ ಮೇಲೆ ಪರಿಣಾಮ ಬೀರಿ, ಅವು ವೇಗವಾಗಿ ಸೌರವ್ಯೂಹದ ಗ್ರಹಗಳಿಗೆ ಢಿಕ್ಕಿ ಹೊಡೆಯುವಂತೆ ಮಾಡುತ್ತದೆ. ದಶಕಗಳ ಕಾಲದವರೆಗೂ ಗ್ರಹಗಳಿಗೆ ಆಂತರಿಕ ನೋವನ್ನುಂಟು ಮಾಡುತ್ತದೆ. ನೆಮೆಸಿಸ್ ಸೂರ್ಯನಂತೆ ದೊಡ್ಡ ಗಾತ್ರ ಹೊಂದಿಲ್ಲದಿದ್ದರೂ ದೂರದಿಂದಲೇ ಹಾನಿಯನ್ನುಂಟು ಮಾಡುತ್ತದೆ ಎಂದು ಕೆಲ ಖಗೋಳ ಶಾಸ್ತ್ರಜ್ಞರು ವಾದಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ನೆಮೆಸಿಸ್‌ನ ಪರಿಕಲ್ಪನೆ ತಣ್ಣಗಾಗಿದೆ

# ಋತುಚಕ್ರದ ಅವಧಿಯಲ್ಲಿ ಜಂಕ್‌ಫುಡ್ ಬಳಕೆ ಬೇಡ

## ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಾನಕಿ ಹೇಳಿಕೆ | ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ

■ ಹಂಪಿ ಟೈಮ್ಸ್ ಚಿತ್ರದುರ್ಗ

ಋತುಚಕ್ರದ ಅವಧಿಯಲ್ಲಿ ಯಾವುದೇ ಜಂಕ್‌ಫುಡ್ ಬಳಕೆ ಮಾಡಬಾರದು. ಪೌಷ್ಟಿಕಾಂಶವುಳ್ಳ ಆಹಾರ ಸೇವನೆ ಅತಿ ಮುಖ್ಯವಾದದ್ದು, ಇದರಿಂದ ರಕ್ತ ಹೀನತೆ ತಡೆಗಟ್ಟಬಹುದು ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಾನಕಿ ಹೇಳಿದರು.

ಬುದ್ಧ ನಗರ ಆರೋಗ್ಯ ಕೇಂದ್ರದಲ್ಲಿ ವಿಶ್ವ ಋತುಚಕ್ರ ನೈರ್ಮಲ್ಯ ದಿನದ ಅಂಗವಾಗಿ ಆರೋಗ್ಯ ಇಲಾಖೆ ವತಿಯಿಂದ ನಗರದ ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಋತುಮತಿ ಆದ ಹುಡುಗಿ ಯುವತಿಯಾಗಿ ನಂತರ ಮಹಿಳೆಯಾಗಿ ಸಂತಾನೋತ್ಪತ್ತಿ ಕ್ರಿಯೆಗೆ ಅರ್ಹತೆ ಪಡೆಯುತ್ತಾಳೆ. ಪ್ರತಿ ತಿಂಗಳು 28 ರಿಂದ 30 ದಿನಗಳ ಒಳಗೆ ಆಗುವ ಋತುಚಕ್ರ ಮಹಿಳೆಗೆ ಗರ್ಭ ಧರಿಸಲು ಅತ್ಯಗತ್ಯ ಕ್ರಿಯೆ ಎಂದು ಹೇಳಿದರು.



9 ರಿಂದ 16 ವರ್ಷದೊಳಗಿನ ಹೆಣ್ಣು ಮಕ್ಕಳಲ್ಲಿ ಪ್ರಥಮವಾಗಿ ಋತುಸ್ರಾವ ಆರಂಭವಾಗುತ್ತದೆ ಇಂತಹ ಸಂದರ್ಭದಲ್ಲಿ ಮುಜುಗರವಿಲ್ಲದೆ ಪಾಲಕರ ಜೊತೆ ವಿಷಯ ಹಂಚಿಕೆ ಮಾಡಿಕೊಳ್ಳಬೇಕು. ಪೋಷಕರು ಸಹ ಅಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳ ಜೊತೆ ಸ್ನೇಹ ಭಾವಿಯಾಗಿ ವರ್ತಿಸಬೇಕು ಅವರಲ್ಲಿ ಆಗುವಂತಹ ಮಾನಸಿಕ, ದೈಹಿಕ, ಭಾವನಾತ್ಮಕ ಬದಲಾವಣೆಗಳನ್ನು ಗಮನಹರಿಸಿ ಅವರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ತಿಳಿಸಿದರು. ಹಾಗೂ ವೈಯುಕ್ತಿಕ ಸುಚಿತ್ವದ ಕಡೆ ಹೆಚ್ಚಿನ ಮಾಹಿತಿಯನ್ನು ನೀಡಿ ಸ್ವಚ್ಛತೆ ಬಗ್ಗೆ ಆದ್ಯತೆ ನೀಡಿಬೇಕು.

ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಬಗ್ಗೆ ತಿಳಿದುಕೊಳ್ಳಬೇಕು. ಮುಟ್ಟಾದ ದಿನಗಳಲ್ಲಿ ಪ್ರತಿ ನಾಲ್ಕರಿಂದ ಆರು ಗಂಟೆಗಳಿಗೊಮ್ಮೆ ಪ್ಯಾಡ್‌ಗಳನ್ನು ಬದಲಾಯಿಸಲು ಮಾಹಿತಿಯನ್ನು ಪೋಷಕರು ಸಹ ಹೆಣ್ಣು ಮಕ್ಕಳಿಗೆ ತಿಳಿಸಿ ಗಮನಹರಿಸುವುದು ಹಾಗೂ ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಬಗ್ಗೆ ಕೂಡ ತಿಳಿಸಬೇಕು ಹಾಗೂ ಒಂದು ವೇಳೆ ಋತುಚಕ್ರದ ವೇಳೆಯಲ್ಲಿ ಅಧಿಕ ರಕ್ತಸ್ರಾವದಿಂದ ಬಳಲುತ್ತಿದ್ದರೆ ತಕ್ಷಣ ತಜ್ಞ ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. ಋತುಸ್ರಾವದ ಸಂದರ್ಭದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡದಿದ್ದರೆ ಗರ್ಭಕೋಶದ ಸೋಂಕಿಗೆ ತುತ್ತಾಗಬಹುದು. ಆದ್ದರಿಂದ ಹೆಚ್ಚಿನ ಆದ್ಯತೆ ನೀಡಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬುದ್ಧ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸುರೇಂದ್ರ, ಅಂಗನವಾಡಿ ಮೇಲ್ವಿಚಾರಕಿ ನಿರ್ಮಲ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸ್, ತಾಲ್ಲೂಕು ಆಶಾ ಬೋಧಕರಾದ ತಬಿತ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಾದ ಗೀತಾ, ಏಕಾಂತಮ್ಮ, ಸುಜಾತ ಹಾಗೂ ಅಂಗನವಾಡಿ ಕಾರ್ಯಕರ್ತರು, ಹದಿಹರೆಯದ ಹೆಣ್ಣು ಮಕ್ಕಳು ಹಾಜರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 293 Issue: 293 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 31.05.2025 31.05.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2



HAMPI TIMES
PRINT & DIGITAL
Daily NEWS PAPER
To book Classified Display Ad in HAMPI TIMES Please call on
9448633038
Bring your product to local hearts





## ದಿನಪತ್ರಿಕೆ ಓದು ಮಕ್ಕಳ ಭವಿಷ್ಯಕ್ಕೆ ಸಂಪತ್ತು!

ನಿಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯ ಜತೆ ಶಿಕ್ಷಣದಲ್ಲಿ ಸಾಧಕರಾಗಬೇಕೇ ? ಹಾಗಿದ್ದರೆ, ಪ್ರತಿದಿನ 'ಹಂಪಿ ಟೈಮ್ಸ್' ದಿನಪತ್ರಿಕೆಯನ್ನು ಓದಲು ಪ್ರೋತ್ಸಾಹಿಸಿ!

**ಜ್ಞಾನ ವೃದ್ಧಿ**
ದಿನನಿತ್ಯದ ಪ್ರಪಂಚದ ಅರಿವು, ಪ್ರಚಲಿತ ಘಟನೆಗಳು, ವಿಜ್ಞಾನ, ಕ್ರೀಡೆ, ಕಲೆ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ ಮಕ್ಕಳು ತಿಳಿದುಕೊಳ್ಳಲು ಇದು ಅತ್ಯುತ್ತಮ ಮಾರ್ಗ.

**ಓದುವ ಹವ್ಯಾಸ**
ಚಿಕ್ಕ ವಯಸ್ಸಿನಿಂದಲೇ ಓದುವ ಆಸಕ್ತಿ ಬೆಳೆಸುವುದರಿಂದ ಅವರ ಭಾಷಾ ಕೌಶಲ್ಯಗಳು, ಶಬ್ದ ಸಂಪತ್ತು ಮತ್ತು ಗ್ರಹಿಕೆ ಸಾಮರ್ಥ್ಯ ಹೆಚ್ಚುತ್ತದೆ.

**ಸಾಮಾನ್ಯ ಜ್ಞಾನ**
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮತ್ತು ಭವಿಷ್ಯದ ಸವಾಲುಗಳಿಗೆ ಅಗತ್ಯವಾದ ಸಾಮಾನ್ಯ ಜ್ಞಾನವನ್ನು ಪತ್ರಿಕೆ ಓದುವ ಮೂಲಕ ಪಡೆಯಬಹುದು.

**ವಿಶ್ಲೇಷಣಾತ್ಮಕ ಚಿಂತನೆ**
ವಿವಿಧ ವಿಷಯಗಳ ಕುರಿತು ಲೇಖನ ಗಳನ್ನು ಓದುವುದರಿಂದ ಮಕ್ಕಳು ವಿಶ್ಲೇಷಣಾತ್ಮ ಕವಾಗಿ ಯೋಚಿಸಲು ಮತ್ತು ತಮ್ಮದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಕಲಿಯುತ್ತಾರೆ. 'ಹಂಪಿ ಟೈಮ್ಸ್' ದಿನಪತ್ರಿಕೆಯನ್ನು ನಿಮ್ಮ ಮಕ್ಕಳ ದೈನಂದಿನ ಚಟುವಟಿಕೆಯ ಭಾಗವಾಗಿಸಿ, ಅವರಿಗೆ ಜ್ಞಾನದ ಬೃಹತ್ ಸಂಪತ್ತನ್ನು ನೀಡಿರಿ. ಇದು ಅವರ ಶೈಕ್ಷಣಿಕ ಯಶಸ್ಸಿಗೆ ಮತ್ತು ಸ್ವಾಭಿಮಾನ ಬದುಕಿಗೆ ಭದ್ರ ಬುನಾದಿಯಾಗುತ್ತದೆ.

epaper.hampitimes.com
Scan For Digital Colourful
HAMPI TIMES E-paper
ಹಂಪಿ ಟೈಮ್ಸ್ ದಿನಪತ್ರಿಕೆಗಾಗಿ ನಿಮ್ಮ ಸಮೀಪದ ಪತ್ರಿಕೆ ವಿತರಕ/ ಏಜೆಂಟರನ್ನು ಸಂಪರ್ಕಿಸಿ
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join with Us

For Ads-Call
94486 33038


### ಹದಗೆಟ್ಟ ನಗರಸಭೆ, ನೀರಾವರಿ, ಲೋಕೋಪಯೋಗಿ ಇಲಾಖೆ ರಸ್ತೆಗಳು

# ರಸ್ತೆ ಗುಂಡಿ ಮುಚ್ಚಿ ಜೀವ ಉಳಿಸಿ ತಗ್ಗು ಸಣ್ಣದಾದರೂ ಪ್ರಾಣ ಅಮೂಲ್ಯ

### ಶಾಲೆ ಆರಂಭ ವಿದ್ಯಾರ್ಥಿಗಳ ಸಂಚಾರ ಅಧಿಕ। ಮಕ್ಕಳ ಸುರಕ್ಷತೆಗಿರಲಿ ಆದ್ಯತೆ ಜೀವ ಕಳೆದುಕೊಂಡವರ ಕುಟುಂಬಕ್ಕೆ ಸಾಂತ್ವಾನ ಜೀವಕ್ಕೆ ಸಾಟಿಯಾಗಲಾರದು

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ನಗರಸಭೆ ಪಕ್ಕದಲ್ಲಿ ಹಾದುಹೋಗಿರುವ ಬಸವಣ್ಣ ಕಾಲುವೆ ಪಕ್ಕದ ಸಿಸಿ ರಸ್ತೆಯನ್ನು ಅಗೆದು, ಮೊದಲಿನಂತೆ ಸರಿಪಡಿಸದೆ ಬಿಟ್ಟಿರುವುದರಿಂದ ನಿತ್ಯ ಸಾವಿರಾರು ವಿದ್ಯಾರ್ಥಿಗಳನ್ನು ಹೊತ್ತೊಯುವ ವಾಹನ ಸವಾರರು, ಆಟೋ, ಕಾರು ಪ್ರಯಾಣಿಕರು ಜೀವಭಯದೊಂದಿಗೆ ಸಂಚರಿಸುವಂತಾಗಿದೆ. ದಿಢೀರನೆ ಬ್ರೇಕ್ ಹಾಕಿದರೆ ನಿಯಂತ್ರಣ ತಪ್ಪಿ ಬಸವಣ್ಣ ಕಾಲುವೆಗೆ ಉರುಳಿ ಜೀವ ಕಳೆದುಕೊಳ್ಳುವ ಪರಿಸ್ಥಿತಿ ಕಣ್ಣಿಗೆ ರಾಚುತ್ತಿದ್ದರು ಸಂಬಂಧಿಸಿದ ಅಧಿಕಾರಿಗಳ ಕಣ್ಣಿಗೇಕೆ ಕಾಣುತ್ತಿಲ್ಲ. ಸರ್ಕಾರ ರಸ್ತೆ ತೆರಿಗೆ ಸೇರಿದಂತೆ ಎಲ್ಲಾ ರೀತಿಯ ತೆರಿಗೆ ಪಡೆಯುತ್ತಿದೆ. ಆದರೆ ಅವುಗಳ ನಿರ್ವಹಣೆಯಲ್ಲಿ ಮಾತ್ರ ಕಣ್ಮುಚ್ಚಿ ಕುಳಿತಂತಿದೆ. ಸಂಬಂಧಿಸಿದ ಅಧಿಕಾರಿಗಳು ನಗರದ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಕೂಡಲೇ ಮುಚ್ಚಿ ಸವಾರರ, ಪ್ರಯಾಣಿಕರ ಜೀವ ರಕ್ಷಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಯಾವ ರಸ್ತೆಯಲ್ಲಿ ಗುಂಡಿ ಬಿದ್ದರೆ ಯಾರಿಗೆ ದೂರಬೇಕು? ಯಾವ ರಸ್ತೆಗಳು, ನಗರಸಭೆ, ಪಿಡಬ್ಲ್ಯೂಡಿ, ನೀರಾವರಿ ಇಲಾಖೆ ಹೀಗೆ ಯಾರ ವ್ಯಾಪ್ತಿಗೆ ಬರುತ್ತವೆ ? ಅವುಗಳ ನಿರ್ವಹಣೆ ಹೊಣೆ ಯಾರದ್ದು ? ಎಂಬುದನ್ನು ರಸ್ತೆಯುದ್ದಕ್ಕೂ ನಿಗದಿತ ದೂರದಲ್ಲಿ ಜನರಿಗೆ ಕಾಣುವಂತೆ ಪ್ರಕಟಿಸಿದರೆ, ಪ್ರಜ್ಞಾವಂತ ಸಾರ್ವಜನಿಕರು ಫೋಟೊ ತೆಗೆದು ಅಧಿಕಾರಿಗಳ ಮೊಬೈಲ್‌ಗಳಿಗೆ ಕಳಿಸಿ ಗಮನ ಸೆಳೆಯಬಲ್ಲರು. ಅಲ್ಲಲ್ಲಿ ರಸ್ತೆ ನಿರ್ವಹಣೆಗೆ ಸಂಬಂಧಿಸಿದವರ ಮೊಬೈಲ್ ನಂಬರ್ ಫಲಕ ಹಾಕಿ ಎಂದು ವಾಹನ ಸವಾರರು ಒತ್ತಾಯಿಸಿದ್ದಾರೆ.





## ಚಿತ್ರ ಸುದ್ದಿ



ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಕಚೇರಿಯಿಂದ ಖಾಸಗಿ ಶಾಲೆಗಳ ಸಿಬ್ಬಂದಿ 2025–26ನೇ ಸಾಲಿನ 1 ರಿಂದ 10ನೇ ತರಗತಿ ಪುಸ್ತಕಗಳನ್ನು ಪಡೆಯುತ್ತಿದ್ದಾರೆ. ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕ ಶಿವರಾಂ ನಿವೇದಿತಾ ಶಾಲಾ ಸಿಬ್ಬಂದಿಗೆ ಪಠ್ಯಪುಸ್ತಕ ವಿತರಿಸಿದರು.



ಹೊಸಪೇಟೆ ತಾಲೂಕಿನ ಗುಂಡಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಶಾಲಾ ಆರಂಭದಲ್ಲೆ ಉಚಿತವಾಗಿ ಪುಸ್ತಕ ವಿತರಿಸಿದರು.



ಹೊಸಪೇಟೆ ತಾಲೂಕಿನ ಕಮಲಾಪುರ ಕ್ಲಸ್ಟರ್ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಬಿಇಓ ಕಚೇರಿಯಿಂದ ಪಠ್ಯಪುಸ್ತಕ ಪೂರೈಸುತ್ತಿರುವ ಕ್ಷಣ.

# ತಂಬಾಕು ಸೇವನೆ ಬಿಡಿ ಆರೋಗ್ಯವಾಗಿರಿ

### ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಹೇಳಿಕೆ। ತಂಬಾಕು ಅಕ್ರಮವಾಗಿ ಮಾರಾಟ ಮಾಡಿದರೆ ಕಠಿಣ ಕ್ರಮ



■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ವ್ಯಾಪ್ತಿಯ ಶಾಲಾ–ಕಾಲೇಜು, ಬಸ್ ನಿಲ್ದಾಣ, ಪ್ರವಾಸಿ ತಾಣಗಳು ಸೇರಿ ನಿರ್ಬಂಧಿತ ಪ್ರದೇಶಗಳಲ್ಲಿ ಅಕ್ರಮ ತಂಬಾಕು ಮಾರಾಟಗಾರರ ಮೇಲೆ ಸೂಕ್ತ ಕಠಿಣ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು. ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು,

ಜಿಲ್ಲೆಯಲ್ಲಿ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣ ಕಾರಣಗಳಲ್ಲಿ ತಂಬಾಕು ಸೇವನೆ ಪ್ರಮುಖ ಕಾರಣವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಂಬಾಕು ಸೇವನೆಯಿಂದ ಮಾನವನ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕಿದೆ. ತಂಬಾಕು ಸೇವನೆ ತ್ಯಜಿಸಲು ಅಗತ್ಯ ಆರೋಗ್ಯ ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆ ಮೂಲಕ ತಂಬಾಕು ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸಬೇಕು. ಯುವಕರಿಗೆ ತಂಬಾಕು ಸೇವನೆ ಸಿಗದಂತೆ ಅಂಗಡಿಗಳಲ್ಲಿ ನಿಷೇಧ ಮಾಡಬೇಕು. ತಂಬಾಕು ಮಾರಾಟ ಮಾಡುವ ಅಂಗಡಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಯಾವುದೇ ಜಾಹೀರಾತು ಇರಬಾರದು. 18 ವರ್ಷದೊಳಗಿನ ಅಪ್ರಾಪ್ತ ವಯಸ್ಕರಿಗೆ ತಂಬಾಕು ಮಾರಾಟ ಮಾಡುವ ಯಾವುದೇ ಪುರಾವೆಗಳು ಹಳ್ಳಿಯಲ್ಲಿ ಕಂಡು ಬರಬಾರದು. 18 ವರ್ಷದೊಳಗಿನ ವ್ಯಕ್ತಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿದೆ. ಉಲ್ಲಂಘಿಸಿದರೇ ಶಿಕ್ಷಾರ್ಹ ಎಂಬ ನಾಮಫಲಕವನ್ನು ಎಲ್ಲಾ ತಂಬಾಕು ಉತ್ಪನ್ನ ಮಾರಾಟ ಅಂಗಡಿಗಳಲ್ಲಿ ಅಳವಡಿಸಬೇಕು ಎಂದು ಸೂಚಿಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಅಧಿಕಾರಿ ಶಂಕರನಾಯ್ಕ್, ಆರ್‌ಸಿಎಚ್ ಅಧಿಕಾರಿ ಡಾ. ಜಂಬಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಷಣ್ಮುಖ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿದೊಡ್ಡಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ಜೂ.1 ರಿಂದ ವಿದ್ಯಾರ್ಥಿಗಳ ಉಚಿತ ಬಸ್‌ಪಾಸ್‌ಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ವಿಭಾಗದ 2025–26 ನೇ ಸಾಲಿನ ವಿದ್ಯಾರ್ಥಿಗಳ ಉಚಿತ, ರಿಯಾಯಿತಿ ಬಸ್‌ಪಾಸುಗಳನ್ನು ಸೇವಾಸಿಂಧು ತಂತ್ರಾಂಶದ ಮೂಲಕ ಸಂಪೂರ್ಣ ಗಣಕೀಕೃತವಾಗಿ ಪಾಸುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೊಸಪೇಟೆ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ ಅವರು ತಿಳಿಸಿದ್ದಾರೆ

ವಿಭಾಗದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಹರಪನಹಳ್ಳಿ ಘಟಕಗಳಿಂದ ಪಾಸು ವಿತರಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸಪೇಟೆ ನಗರದ ಬಸ್ ನಿಲ್ದಾಣ ಸೇರಿದಂತೆ ಆಯಾ ತಾಲೂಕಿನ ವಿದ್ಯಾರ್ಥಿಗಳು ಸ್ಥಳೀಯ ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ಕ ಕೆಫೆ ಕ್ಯಾಂಟೀನ್‌ಗೆ ಅಡುಗೆ ಮಾಡಲು ಸ್ವಸಹಾಯ ಗುಂಪುಗಳಿಗೆ ಅರ್ಜಿ ಆಹ್ವಾನ




■ **ಹಂಪಿ ಟೈಮ್ಸ್ ಹೊಸಪೇಟೆ**

ಸಂಜೀವಿನಿ ಎನ್‌ಆರ್‌ಎಲ್‌ಎಂ ಯೋಜನೆಯಡಿಯಲ್ಲಿ ಹಂಪಿಯಲ್ಲಿ ಸ್ಥಾಪಿಸುವ ಅಕ್ಕ ಕೆಫೆ ಮೊಬೈಲ್ ಕ್ಯಾಂಟಿನ್‌ನಲ್ಲಿ ಕನಿಷ್ಟ 5 ವರ್ಷ ಕ್ಯಾಂಟೀನ್ ವಿಭಾಗದಲ್ಲಿ ಅನುಭವವಿರುವ ಶುಚಿರುಚಿಯಾದ ಆಹಾರ ತಯಾರಿಸಲು ಆಸಕ್ತಿ ಇರುವ ಅರ್ಹ ಸ್ವ–ಸಹಾಯ ಗುಂಪುಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಆಸಕ್ತಿ ಇರುವ ಹೊಸಪೇಟೆ ತಾಲೂಕಿನ ಹಂಪಿ ಹಾಗೂ ಬುಕ್ಕಸಾಗರ ಗ್ರಾಪಂ ವ್ಯಾಪ್ತಿಯ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಸ್ವ–ಸಹಾಯ ಗುಂಪುಗಳಿಂದ ಅರ್ಜಿ ಸಲ್ಲಿಸಬಹುದು. ಮೇ.29 ರಿಂದ ಜೂ.5 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರ ವಿಭಾಗ ಕಲಾವತಿ ಜಿಲ್ಲಾ ವ್ಯವಸ್ಥಾಪಕರು (ಕೌಶಲ್ಯ) ಮೊ.9538740865 ಇವರನ್ನು ಸಂಪರ್ಕಿಸಬಹುದು ಎಂದು ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಕ್ರಮ್ ಅಲಿ ಷಾ ತಿಳಿಸಿದ್ದಾರೆ.

# ಅನುವಾದ ಕ್ರಿಯಾಶೀಲತೆಯನ್ನು ಬೇಡುವ ಕೆಲಸ

### ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ವೆಂಕಟಗಿರಿ ದಳವಾಯಿ ಅಭಿಮತ

■ **ಹಂಪಿ ಟೈಮ್ಸ್ ಹೊಸಪೇಟೆ**

ಅನುವಾದದ ಹೆಜ್ಜೆ ಗುರುತುಗಳು ಪುಸ್ತಕವು ಸಮಕಾಲೀನತೆ, ಒತ್ತಾಸೆ ಮತ್ತು ಒಳನೋಟಗಳನ್ನು ಕಟ್ಟಿಕೊಡುತ್ತದೆ. ಈ ಕೃತಿ ಓದುಗರು ಮತ್ತು ಓದಿನ ನಡುವಿನ ಸೂಕ್ಷ್ಮತೆಗಳಿಗೆ ಮತ್ತು ಕನ್ನಡ, ತುಳು, ಮಲೆಯಾಳಂ ಅನುವಾದದ ಬಗೆಗಿನ ಪ್ರೀತಿ ಹಾಗೂ ನಿಷ್ಠುರತೆಗೆ ಧ್ವನಿಯಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ವೆಂಕಟಗಿರಿ ದಳವಾಯಿ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ವತಿಯಿಂದ ಶುಕ್ರವಾರ ಮಂಟಪ ಸಭಾಂಗಣದಲ್ಲಿ ಪ್ರೊ. ಮೋಹನ ಕುಂಟಾರ್ ದತ್ತಿನಿಧಿ ಉದ್ಘಾಟನೆ, ಪುಸ್ತಕ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಅನುವಾದ ಸಾಹಿತ್ಯ ವಲಯದಲ್ಲಿ ಪ್ರೊ.ಮೋಹನ ಕುಂಟಾರ್ ಅವರು ಪ್ರಮುಖರಾಗಿ ಗುರುತಿಸಕೊಳ್ಳುತ್ತಾರೆ. ಬಸೀರ್ ಅವರ ಕೃತಿಗಳ ಭಾಷಾಂತರಿಂದ ಇಲ್ಲಿಯವರೆಗೂ ಅನುವಾದ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿರುವರು. ಅನುವಾದವು ಒಂದು ರೀತಿಯ ಕ್ರಿಯಾಶೀಲತೆಯನ್ನು ಬೇಡುವ ಕೆಲಸ. ಯಾವುದೇ ಭಾಷೆಯ ಅನುವಾದ ನೆಲೆಯೊಳಗೆ ನಾವು ಕ್ರಿಯಾಶೀಲತೆಯನ್ನು ಸ್ವೀಕರಿಸದ್ದೇವೆ ಆದರೆ ಅದನ್ನು ದಾಖಲಿಸಿಲ್ಲ ಅಷ್ಟೇ. ಸಾಂಸ್ಕೃತಿಕ ವಲಯದಲ್ಲಿ ಅನುವಾದಗಳನ್ನು ಚರ್ಚಿಸಬೇಕು. ಬಲಿಷ್ಟವಾದ ಸಮುದಾಯಗಳಿಗೆ ಅನುವಾದದ ಅಗತ್ಯವಿಲ್ಲದಿರಬಹುದು ಆದರೆ ಹೊಸತನ್ನು ಬಯಸುವ, ಸ್ವೀಕರಿಸುವ ತಳ ಸಮುದಾಯಗಳಿಗೆ ಅನುವಾದದ ಅಗತ್ಯವಿದೆ ಎಂದರು.



ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾಷಾಂತರ ಒಂದು ಸೃಜನಶೀಲ ಕಲೆ. ಇಂದು ಭಾಷಾಂತರ ವಲಯ ವಿಸ್ತಾರಗೊಂಡಿದೆ. ಸ್ವಾತಂತ್ರ್ಯ ಪೂರ್ವ ಭಾಷಾಂತರ ಮತ್ತು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿನ ಭಾಷಾಂತರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಪ್ರೊ.ಮೋಹನ ಕುಂಟಾರ್ ಅವರು ಭಾಷಾಂತರಕ್ಕೆ ವಿದ್ವತ್ ವಲಯದಲ್ಲಿ ಸ್ಥಾನ ಕಲ್ಪಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದರು.


ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ ಮಾತನಾಡಿ, ಪ್ರೊ. ಮೋಹನ ಕುಂಟಾರ್ ಅವರು ಸರಳ ಸಜ್ಜನಿಕೆ ಮತ್ತು ಶಿಸ್ತಿಗೆ ಹೆಸರುವಾಸಿಯಾದ ವ್ಯಕ್ತಿ. ಇವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ವಿವಿಧ ಅಧ್ಯಯನ ಕೇಂದ್ರಗಳ ನಿರ್ದೇಶಕರಾಗಿ, ಡೀನರಾಗಿ ಅತ್ಯುತ್ತಮ ಕಾರ್ಯನಿರ್ವಹಿಸಿದ್ದಾರೆ ಎಂದರು.

ದ್ರಾವಿಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ >>4

## ಕೆ.ಪಿ.ಈರಮ್ಮಪದ್ಮನಾಭ ನಿಧನ

**ಹೊಸಪೇಟೆ:** ನಗರದ ಮೃತ್ಯುಂಜಯನಗರದ ನಿವಾಸಿ,ವಿಜಯನಗರ ಜಿಲ್ಲಾ ಡಾ॥ ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಕೆ ಪಿ ಉಮಾಪತಿ ಅವರ ತಾಯಿ ಕೆ.ಪಿ. ಈರಮ್ಮಪದ್ಮನಾಭ (72) ಶುಕ್ರವಾರ ನಿಧನರಾದರು.

ಮೃತರಿಗೆ ನಾಲ್ವರು ಪುತ್ರರು, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಮೇ 31ರಂದು ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.





## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 30–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.96 ಅಡಿ |
| ಒಳ ಹರಿವು | 15778 ಕ್ಯುಸೆಕ್ |
| ಹೊರ ಹರಿವು | 153 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.678 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.38 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 30 ಕ್ಯುಸೆಕ್ |
| ಸಾಮರ್ಥ್ಯ | 3.330 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

**31–05–2025 – ಶನಿವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುಷ್ಯ |
| ಯೋಗ | : ವೃದ್ಧಿ |
| ಕರಣ | : ಭವ |
| ಸೂರ್ಯೋದಯ | : 05:42:18 |
| ಸೂರ್ಯಾಸ್ತ | : 19:07:12 |
| ರಾಹು ಕಾಲ | : 09:04–10:44 |
| ಯಮಘಂಡ ಕಾಲ | : 14:05–15:46 |
| ಗುಳಿಕ ಕಾಲ | : 05:42–07:43 |

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.

# ಉತ್ತಮ ಕೆಲಸಕ್ಕೆ ಹಂಪಿ ಇತಿಹಾಸವೇ ಸ್ಫೂರ್ತಿ

## 35 ವರ್ಷಗಳ ಎಲ್‌ಐಸಿ ಸೇವೆಗೆ ನಿವೃತ್ತಿ । ಜನರ ಸಹಕಾರ ಸ್ಮರಿಸಿದ ಜಿ.ಬಿ.ಶೆಣೈ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಕಚೇರಿಯಲ್ಲಿ ಕಳೆದ 35 ವರ್ಷಗಳ ಕಾಲ ಅಭಿವೃದ್ಧಿ ಅಧಿಕಾರಿಯಾಗಿ ದಕ್ಷ ಸೇವೆ ಸಲ್ಲಿಸಿದ ಜಿ.ಬಿ. ಶೆಣೈ ಅವರು ಶುಕ್ರವಾರ ಸೇವೆಯಿಂದ ನಿವೃತ್ತಿ ಹೊಂದಿದರು. ಈ ಸಂದರ್ಭದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿವೃದ್ಧಿ ಅಧಿಕಾರಿ ಜಿ.ಬಿ. ಶೆಣೈ ಅವರು ಸನ್ಮಾನ ಸ್ವೀಕರಿಸಿ, ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ದೊರೆತ ಎಲ್ಲರ ಸಹಕಾರ, ಪ್ರೀತಿ ಮತ್ತು ಹಂಪಿಯ ಐತಿಹಾಸಿಕ ಶಕ್ತಿಯನ್ನು ನೆನೆದು ಭಾವುಕರಾದರು.

ನಂತರ ಮಾತನಾಡಿ ಅವರು, ನಾನು ಕಳೆದ ಮೂರುವರೆ ದಶಕಗಳ ಕಾಲ ಹೊಸಪೇಟೆಯಲ್ಲಿ ಎಲ್‌ಐಸಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಈ ಸುದೀರ್ಘ ಅವಧಿಯಲ್ಲಿ ನನ್ನ ಯಶಸ್ಸಿಗೆ ಕಾರಣರಾದ ನನ್ನ ಸಹೋದ್ಯೋಗಿಗಳು, ಹಿರಿಯ ಅಧಿಕಾರಿಗಳು, ಏಜೆಂಟರುಗಳು ಮತ್ತು ಗ್ರಾಹಕರಿಗೆ ನಾನು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ತಮ್ಮ ವೃತ್ತಿ ಜೀವನದ ಅನೇಕ ಸವಾಲುಗಳು ಮತ್ತು ಸಾಧನೆಗಳನ್ನು ನೆನಪಿಸಿಕೊಂಡ ಅವರು, ಹೊಸಪೇಟೆಯು ನನ್ನ ವೃತ್ತಿಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇಲ್ಲಿನ ಜನರು ತೋರಿದ ವಿಶ್ವಾಸ ಮತ್ತು ಬೆಂಬಲ ನನ್ನನ್ನು ಇನ್ನಷ್ಟು ಉತ್ತಮವಾಗಿ ಕೆಲಸ ಮಾಡಲು ಪ್ರೇರೇಪಿಸಿತು. ಹಂಪಿಯ ಐತಿಹಾಸಿಕ ಮತ್ತು ಆಧ್ಯಾತ್ಮಿಕ ಶಕ್ತಿಯ ಬಗ್ಗೆಯೂ ಪ್ರಸ್ತಾಪಿಸಿದ ಅವರು, ಹಂಪಿ ಕೇವಲ ಒಂದು ಪ್ರವಾಸಿ ತಾಣವಲ್ಲ, ಅದು ಒಂದು ಶಕ್ತಿ ಕೇಂದ್ರ. ಅದರ ಇತಿಹಾಸ ಮತ್ತು ಆಧ್ಯಾತ್ಮಿಕತೆಯು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ. ಈ ಸ್ಥಳದಲ್ಲಿ ಸೇವೆ ಸಲ್ಲಿಸಲು ನನಗೆ ಅವಕಾಶ ದೊರೆತಿದ್ದು ನನ್ನ ಪುಣ್ಯ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಎಲ್‌ಐಸಿ ಶಾಖಾಧಿಕಾರಿ ಬಿ.ಸುರೇಶ ಮಾತನಾಡಿ, ಜಿ ಬಿ ಶೆಣೈ ಅವರಲ್ಲಿ ಸದಾ ಧನಾತ್ಮಕ ಚಿಂತನೆಯನ್ನು ಕಂಡಿದ್ದೇನೆ. ಈ ಬಾರಿ ಪಾಲಿಸಿ ಆಗುತ್ತವೆಯಾ ಎಂದು ಕೇಳಿದರೆ ಖಂಡಿತಾ ಆಗುತ್ತದೆ ಎಂದು ಆತ್ಮವಿಶ್ವಾಸದಿಂದ ನುಡಿಯುತ್ತಿದ್ದರು. ಹಾಗೆಯೇ ಅಂದುಕೊಂಡ ಗುರಿಯನ್ನು ತಲುಪುವಲ್ಲಿ ಯಶಸ್ವಿಯಾಗಿ ದ್ದಾರೆ. ಯುವ ಏಜೆಂಟರನ್ನು ಹುಡುಕಿ, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಮಾರ್ಗದರ್ಶನ ಮಾಡಿ ಅನೇಕರನ್ನು ಬೆಳೆಸಿದ್ದಾರೆ. ಅವರ ಮಾರ್ಗದರ್ಶನ ಪಡೆದ ಏಜೆಂಟರು ಅವರ ನಿರೀಕ್ಷೆಯಂತೆ ಇನ್ಮುಂದೆಯೂ ಸೇವೆ ಸಲ್ಲಿಸಿ ಮತ್ತಷ್ಟು ಕೀರ್ತಿ ಹೆಚ್ಚಿಸಬೇಕು ಎಂದರು.

ಎಲ್‌ಐಸಿ ಸಹೋದ್ಯೋಗಿಗಳು, ಶಾಖಾ ಸಿಬ್ಬಂದಿ ಎಲ್‌ಐಸಿ ಏಜೆಂಟರುಗಳು ಮತ್ತು ಹಿರಿಯ ಅಧಿಕಾರಿಗಳು ಸೇವೆಯನ್ನು ಸ್ಮರಿಸಿ, ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಹಾರೈಸಿದರು. ನಿವೃತ್ತಿ ಹೊಂದಿದ ಜಿ.ಬಿ.ಶಣೈ ಮತ್ತು ಅವರ ಪತ್ನಿ ರೇಣುಕಾ ಅವರಿಗೆ ಶಾಲು ಹೊದಿಸಿ, ಫಲತಾಂಬೂಲ ನೀಡಿ ಗೌರವಿಸಲಾಯಿತು.

ನಿವೃತ್ತ ಅಭಿವೃದ್ಧಿ ಅಧಿಕಾರಿಗಳಾದ ಕುಲಕರ್ಣಿ, ಮಲ್ಲಿಕಾರ್ಜುನ, ಅಭಿವೃದ್ಧಿ ಅಧಿಕಾರಿ ಚೇತನ್ ರಾಜ್, ಎಸ್.ಸಾಲಿಯಾನ, ಚಂದ್ರಾಮಪ್ಪ, ಉದಯಕುಮಾರ್, ವಿಷ್ಣುವರ್ಧನ್, ಜಂಬನಗೌಡ, ರಮೇಶ ಸೇರಿದಂತೆ ಇತರರು ಇದ್ದರು.




ಉಡಪಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದವತಿಯಿಂದ ಜರುಗಿದ ಪ್ರತಿಭಾ ಪುರಸ್ಕಾರದಲ್ಲಿ ಹೊಸಪೇಟೆಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆ(ಮಾಪು) ವಿದ್ಯಾರ್ಥಿನಿ ಎಸ್ಸೆಸ್ಸೆಯಲ್ಲಿ ಸರ್ಕಾರಿ ಕನ್ನಡ ಮಾಧ್ಯಮದ ತಾಲೂಕು ಟಾಪರ್ ಆದ ಇಂದುಶ್ರೀಯನ್ನು ಉಡುಪಿ ಜಿಲ್ಲಾ ಸಂಸ್ಥೆಯಿಂದ ಶುಕ್ರವಾರ ಸನ್ಮಾನಿಸಿದ ಕ್ಷಣ.

# ಬಿವಿಎ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬ್ಯಾಚುಲರ್ ಆಫ್ ವಿಜುಯಲ್ ಆರ್ಟ್ಸ್ ಪದವಿ ಪ್ರವೇಶಾತಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಿದ್ದಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಅರ್ಹ ವಿದ್ಯಾರ್ಥಿ ಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್ ತಿಳಿಸಿದ್ದಾರೆ.

ಆಸಕ್ತ ಅಭ್ಯರ್ಥಿಗಳು ಅಂತರ್ಜಾಲ http://uucms.karnataka.gov.in ಅಥವಾ http://www.cavamysore.karnataka.gov.in ಮೂಲಕ ಜೂ.10 ರೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. 3ನೇ ಸೆಮಿಸ್ಟರ್‌ನಿಂದ ಚಿತ್ರಕಲೆ. ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ 08212438931 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

# ಡಿಸಿ, ಸಿಇಒಗಳಿಗೆ ಮುಖ್ಯಮಂತ್ರಿ ಸೂಚನೆ

## ಡಿಸಿ, ಸಿಇಒಗಳು ತಮ್ಮ ಪ್ರವಾಸ ಕಾರ್ಯಕ್ರಮ ಮೊದಲೇ ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಬೇಕು
## ಕಾರು, ಮನೆ ಸೇರಿ ಎಲ್ಲಾ ಸವಲತ್ತುಗಳನ್ನು ನಾವು ಕೊಟ್ಟಿರುವುದು ಜನರ ತೆರಿಗೆ ಹಣದಲ್ಲಿ ಮರೆಯಬಾರದು



■ **ಹಂಪಿ ಟೈಮ್ಸ್ ಬೆಂಗಳೂರು**

**ಸಿಎಂ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಒಗಳ ಸಭೆಯಲ್ಲಿ ಪ್ರಗತಿ ಹಾಗೂ ಸರ್ಕಾರ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಕುರಿತು ಅಧಿಕಾರಿಗಳಿಗೆ ಶುಕ್ರವಾರ ಖಡಕ್ ಸೂಚನೆ ನೀಡಿದರು.**

**ಹೈಲೈಟ್ಸ್:** ■ ಸಂವಿಧಾನದ ಆಶಯ ಮತ್ತು ಧ್ಯೇಯೋದ್ದೇಶಗಳಿಗೆ ಯಾರೂ ವಿರುದ್ಧವಾಗಿ ಕಾರ್ಯನಿರ್ವ ಹಿಸಬಾರದು. ಅಂತಹ ಶಕ್ತಿಗಳು ಬೆಳೆಯಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಇತ್ತೀಚಿನ ದಿನಗಳಲ್ಲಿ ಇಂತಹ ಶಕ್ತಿಗಳು ತಲೆಎತ್ತುತ್ತಿದ್ದು, ಅಂತಹ ಶಕ್ತಿಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಅಂತಹ ವ್ಯಕ್ತಿಗಳೂ ಯಾರೇ ಆಗಿದ್ದರೂ, ಅವರನ್ನು ಮಟ್ಟ ಹಾಕುವುದು ಅಂತಹ ಶಕ್ತಿಗಳು ಬೆಳೆಯದಂತೆ ನೋಡಿಕೊಳ್ಳಬೇಕಾದುದು ಡಿಸಿ, ಸಿಇಒ, ಎಸ್ಪಿಗಳ ಜವಾಬ್ದಾರಿ ತಾನೇ ಎಂದು ಮುಖ್ಯಮಂತ್ರಿಗಳು ಖಾರವಾಗಿ ಪ್ರಶ್ನಿಸಿದರು.

■ ಹಿಂದಿನ ಸಭೆಯಲ್ಲಿ ನೀಡಿದ ಸೂಚನೆಗಳು, ತೆಗೆದುಕೊಂಡ ನಿರ್ಣಯಗಳಲ್ಲಿ ಕೆಲವು ಇಲಾಖೆಗಳು ಶೇ100 ರಷ್ಟು ಪ್ರಗತಿ ತೋರಿಸಿಲ್ಲ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ರಾಜಿ ಇಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳ ಮೇಲೆ ನಿಷ್ಠುರವಾಗಿ ಕ್ರಮ ಕೈಗೊಳ್ಳುವುದು ನಮಗೆ ಅನಿವಾರ್ಯ ಆಗುತ್ತದೆ.

■ ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿಗಳು ಮತ್ತು ಸಿಇಒ ಗಳು ತಮ್ಮ ಅಹಂ ಬದಿಗೊಟ್ಟಿ ಸಮನ್ವಯದಿಂದ ಕೆಲಸ ಮಾಡಿದರೆ ಮಾತ್ರ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯ. ಈ ಉದ್ದೇಶಕ್ಕೇ ನೀವುಗಳು ಐಎಎಸ್ ಮಾಡಿರುವುದು. ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

■ 10–10–1949 ರಂದು ಸಂವಿಧಾನ ಜಾರಿ ಸಭೆಯಲ್ಲಿ ಇಂಡಿಯನ್ ಸಿವಿಲ್ ಸರ್ವೀಸ್ ಬೇಕಾ ಎಂದು ಚರ್ಚೆ ಆಗಿ ಐಎಎಸ್ ಬೇಕು ಎನ್ನುವ ನಿರ್ಧಾರಕ್ಕೆ ಬರಲಾಗಿದೆ. ಆ ಸಭೆಯಲ್ಲಿ ವಲ್ಲಭಾಬಾಯಿ ಪಟೇಲರು "ದೇಶವನ್ನು ನೈಜ ಸ್ವಾತಂತ್ರ್ಯ ಹೋರಾಟಗಳ ಆಶಯದಲ್ಲಿ ಮುನ್ನಡೆಸಲು ಐಎಎಸ್ ಸೇವೆ ಇರಬೇಕು, ಇದರ ನೈಜ ಕಾಳಜಿಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಸಾಮಾಜಿಕ ನ್ಯಾಯ

■ ವಲ್ಲಭಬಾಯಿ ಅವರ ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕು. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಕೆಲಸ ಮಾಡುವವರ ವಿರುದ್ಧ ಮತ್ತು ಜನಪರ ಆಶಯಗಳಿಗೆ ಸ್ಪಂದಿಸದಿದ್ದರೆ ಅವರ ವಿರುದ್ಧ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ನೀವೆಲ್ಲಾ ಸಂವಿಧಾನ ಓದಿದ್ದೀರಿ, ಅದರ ಆಶಯಗಳಿಗೆ, ಧ್ಯೇಯೋದ್ದೇಶಗಳಿಗೆ ಬದ್ಧರಾಗಿದ್ದೀರಿ ಎಂದು ನಂಬಿದ್ದೇನೆ. ಇದನ್ನು ಕಾರ್ಯ ರೂಪಕ್ಕೆ ತರುವುದರಲ್ಲಿ ವಿಫಲರಾದವರ ವಿರುದ್ಧ ನಾನು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದೇನೆ ಎಂದು ಎಚ್ಚರಿಸಿದರು.

■ ಸಂವಿಧಾನ ವಿರೋಧಿ, ಜನ ವಿರೋಧಿ ದುಷ್ಟ ಶಕ್ತಿಗಳು ಕೆಲವು ಕಡೆ ಬಾಲ ಬಿಚ್ಚುತ್ತಿವೆ. ಅವರು ಎಷ್ಟೇ ಪ್ರಭಾವಿ ಆಗಿರಲಿ, ಕಾನೂನು ಹಾಳು ಮಾಡಿದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ ನಿಮ್ಮ ವಿರುದ್ಧ ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಜಿಲ್ಲಾಧಿಕಾರಿಮತ್ತು ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

■ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಇವೆರಡಕ್ಕೂ ನೇರಾ ನೇರಾ ಸಂಬಂಧವಿದೆ.

■ ಕಾನೂನು ಸುವ್ಯವಸ್ಥೆ ಹದಗೆಟ್ಟರೆ, ಅಭಿವೃದ್ಧಿ ಕುಂಟಿತವಾದಂತೆ. ಇದಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ನೇರ ಹೊಣೆ ಎಂದು ಎಚ್ಚರಿಸಿದರು.

■ ನಾವು ಜನರ ತೆರಿಗೆ ದುಡ್ಡಿನಲ್ಲಿ ಆಡಳಿತ ನಡೆಸುತ್ತಿದ್ದೇವೆ. ನಾವು ಮತ್ತು ನೀವು ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಿರುವುದು ಜನರ ತೆರಿಗೆ ಹಣದಿಂದ ಎನ್ನುವುದನ್ನು ಮರೆಯಬಾರದು. ಕಾರು, ಮನೆ ಸೇರಿ ಎಲ್ಲಾ ಸವಲತ್ತುಗಳನ್ನು ನಾವು ಕೊಟ್ಟಿರುವುದು ತೆರಿಗೆ ಹಣದಲ್ಲಿ. ಆದ್ದರಿಂದ ಜನಪರ ಧೋರಣೆಯಲ್ಲಿ ಕೆಲಸ ಮಾಡಬೇಕು. ಇದೇ ಪ್ರಜಾಪ್ರಭುತ್ವದ ಮೂಲ ಆಶಯ.

■ ಜಿಲ್ಲಾ ಮಟ್ಟದ ಶಾಂತಿ ಸಮಿತಿ ಅಧ್ಯಕ್ಷರು ಜಿಲ್ಲಾಧಿಕಾರಿಗಳೇ ಆಗಿರ್ತಾರೆ. ಶಾಂತಿ ಕಾಪಾಡಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಶಾಂತಿಭಂಗ ಆದ ಮೇಲೆ ಪೋಸ್ಟ್ ಮಾರ್ಟಂ ಮಾಡುತ್ತಾ ಕೂರಬಾರದು. ಮೊದಲೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಏನು ಸಮಸ್ಯೆ ನಿಮಗೆ ಎಂದು ಪ್ರಶ್ನಿಸಿದರು.

■ ತಪಾಸಣಾ ವರದಿಗಳನ್ನು ದಾಖಲೆಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಜಿಲ್ಲೆಯಲ್ಲಿ ಶಾಲೆಗಳು, ಹಾಸ್ಟೆಲ್ಗಳು , ವಸತಿ ಶಾಲೆಗಳು, ಸರಿಯಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿ ಪಡಿಸಲು ನಿರಂತರವಾಗಿ ಭೇಟಿ ನೀಡಬೇಕು. ಮುನ್ಸೂಚನೆ ಇಲ್ಲದೇ ಇಂತಹ ಭೇಟಿಯನ್ನು ಪ್ರತಿ ತಿಂಗಳು ಕಡ್ಡಾಯವಾಗಿ ನಡೆಸಬೇಕು ಎಂದು ಪದೇ ಪದೇ ಸೂಚನೆ ನೀಡಿದ್ದೇನೆ. ಆದರೂ ಕೆಲವರು ಇದನ್ನು ಪಾಲಿಸಿಲ್ಲ ಎನ್ನುವ ವರದಿ ನನಗೆ ಬಂದಿದೆ.

■ ನಿಮ್ಮ ಅಧೀನದಲ್ಲಿರುವ ಇಲಾಖೆಗಳು, ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸುವುದು ನಿಮ್ಮ ಜವಾಬ್ದಾರಿ. ನೀವು ದಕ್ಷತೆಯಿಂದ ಕಾರ್ಯನಿರ್ವಹಿಸದಿದ್ದರೆ ಅಧೀನ ಅಧಿಕಾರಿಗಳು ಕಾರ್ಯನಿರ್ವಹಿಸುವುದನ್ನು ಹೇಗೆ ನಿರೀಕ್ಷಿಸಬಹುದು?

■ ಜಿಲ್ಲೆಯಲ್ಲಿ ಜನಸಾಮಾನ್ಯರಿಗೆ ಆರೋಗ್ಯ, ಸಾರಿಗೆ ಸಂಚಾರದಂತಹ ಮೂಲಭೂತ ಸೌಕರ್ಯಗಳು ಲಭಿಸದಿದ್ದರೆ ಅದನ್ನು ಆಡಳಿತದ ವೈಫಲ್ಯವೆಂದೇ ಪರಿಗಣಿಸಬೇಕಾಗಿದೆ. ಹಾಡಿಗಳಲ್ಲಿ ಶಾಲೆ, ರಸ್ತೆ, ಆಸ್ಪತ್ರೆಯಂತಹ ಮೂಲಸೌಲಭ್ಯ ಒದಗಿಸಲು ಇಂದಿಗೂ ಸರಿಯಾಗಿ ಯಾಕೆ ಸಾಧ್ಯವಾಗಿಲ್ಲ; ಅವರಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಸರಿಯಾಗಿ ಹಕ್ಕು ಒದಗಿಸಲು ಯಾಕೆ ಸಾಧ್ಯವಾಗಿಲ್ಲ. ಜಿಲ್ಲಾಧಿಕಾರಿಗಳು, ಸಿಇಒಗಳು ಇಂತಹ ಹಾಡಿಗಳಿಗೆ ನಿರಂತರ ಭೇಟಿ ನೀಡಬೇಕು.

■ ಕೆಲವು ಜಿಲ್ಲಾಧಿಕಾರಿಗಳು, ಸಿಇಒಗಳು ಸರಿಯಾಗಿ ಕಚೇರಿಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗದಿರುವ ಬಗ್ಗೆ ದೂರುಗಳು ಬಂದಿವೆ. ಸಾರ್ವಜನಿಕ ಭೇಟಿಯ ಅವಧಿಯನ್ನು ಮೊದಲೇ ಪ್ರಕಟಿಸಬೇಕು. ಶೋಷಿತರು, ಬಡವರು, ಜನಸಾಮಾನ್ಯರು ಸಾಮಾನ್ಯವಾಗಿ ಜಿಲ್ಲಾಧಿಕಾರಿ ಅವರ ಕಚೇರಿಗೆ ಬರುತ್ತಾರ. ಅಂತವರ ಸಂಕಷ್ಟಗಳನ್ನು ನೀವೇ ಆಲಿಸದಿದ್ದರೆ ಅದನ್ನು ಬಗೆಹರಿಸುವವರು ಯಾರು? ಯಾರ ಬಳಿ ಅವರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು?

■ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ವಾಸವಿರಬೇಕು. ಎಲ್ಲಾ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿ ಲಭ್ಯವಿದ್ದು, ಜನರಿಗೆ ಲಭ್ಯವಿರಬೇಕು. ಇದನ್ನು ಜಿಲ್ಲಾಧಿಕಾರಿಗಳು ಖಾತ್ರಿಪಡಿಸಬೇಕು. ಕೇಂದ್ರ ಸ್ಥಾನದಲ್ಲಿರದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ಬಗ್ಗೆ ನನಗೆ ವರದಿ ನೀಡಬೇಕು.

■ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಂಗಳಲ್ಲಿ ಕನಿಷ್ಠ ಎರಡು ಬಾರಿ ಆಯಾ ಜಿಲ್ಲೆಗಳಿಗೆ ಭೇಟಿ ನೀಡಿ ಅಭಿವೃದ್ಧಿ ಕಾರ್ಯಗಳ ಪರಿಶೀಲನೆ ನಡೆಸಬೇಕು. ಅದರೊಂದಿಗೆ ಶಾಲೆ, ಹಾಸ್ಟೆಲ್, ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ವರದಿಯನ್ನು ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕು.

■ ಬಾಲ್ಯ ವಿವಾಹ ಆಗುವುದು ಜಿಲ್ಲಾಧಿಕಾರಿಗಳ ಗಮನಕ್ಕೆ ಏಕೆ ಬರುವುದಿಲ್ಲ? ನಿಮ್ಮ ಕೆಳಗಿನವರು ನಿಮಗೆ ವರದಿ ಮಾಡುವುದಿಲ್ಲವೇ? ಕೆಳಗಿನವರು ನಿಮಗೆ ಹೇಳದಿದ್ದರೆ ನಿಮಗೆ ದಕ್ಷತೆ ಇಲ್ಲ ಎಂದು ಅರ್ಥ. ನಿಮಗೆ ಅಧಿಕಾರಿಗಳ ಮೇಲೆ ನಿಯಂತ್ರಣ ಇಲ್ಲ, ನಿಮ್ಮ ಬಗ್ಗೆ ಅವರಿಗೆ ಭಯ ಇಲ್ಲ ಎಂದೇ ಅರ್ಥ ಎಂದು ತರಾಟೆಗೆ ತೆಗೆದುಕೊಂಡರು.

■ ಈ ವರ್ಷ 700 ಬಾಲ್ಯ ವಿವಾಹ ನಡೆದಿದೆ, ಬಾಲ್ಯದಲ್ಲೇ ತಾಯಂದಿರಾದ ಘಟನೆಗಳೂ ವರದಿಗಳಾಗಿವೆ. ಈ ಬಗ್ಗೆ ಹಲವು ಕಡೆ ಎಫ್ ಐಆರ್ ಕೂಡ ದಾಖಲಾಗಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಸ್ವಾತಂತ್ರ್ಯ ಬಂದು ಇಷ್ಟ ವರ್ಷಗಳಾದರೂ 700 ಬಾಲ್ಯ ವಿವಾಹ ನಡೆಯುತ್ತಿದೆ ಎಂದರೆ ಹೇಗೆ? ಬಾಲ್ಯವಿವಾಹ ತಡೆಗೆ ಕಾಯ್ದೆ, ಕಾನೂನುಗಳಿವೆ. ಆದರೂ ಇದನ್ನು ಪರಿಣಾಮಕಾರಿಯಾಗಿ ಕೆಲವು ಕಡೆ ಬಳಸಿಲ್ಲ. ಇದು ತಪ್ಪಲ್ಲವೇ ಎಂದು ಖಾರವಾಗಿ ಪ್ರಶ್ನಿಸಿದರು.

# ಇಂದು ವಿಶ್ವ ತಂಬಾಕು ರಹಿತ ದಿನಾಚರಣೆ ಜನಜಾಗೃತಿ ಜಾಥಾ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಪೊಲೀಸ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ತ ಮೇ.31 ರಂದು, ಬೆಳಿಗ್ಗ 10.30 ಕ್ಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಜನಜಾಗೃತಿ ಜಾಥವನ್ನು ಹಮ್ಮಿಕೊಳ್ಳಲಾಗಿದೆ.

ಗೌರವಾನ್ವಿತ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ ಅವರು ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ. ಅಪರ ಸಿವಿಲ್ ನ್ಯಾಯಾಧೀಶರಾದ ಶೃತಿ ತೇಲಿ ಉಪಸ್ಥಿತರಿಲಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯ್ಕ.ಎಲ್, ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ಪ್ರಾಸ್ತವಿಕ ನುಡಿಯಲಿದ್ದಾರೆ. ಅತಿಥಿಗಳಾಗಿ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಡಾ.ಸತೀಶ್ ಚಂದ್ರ, ಡಾ.ಭಾಸ್ಕರ್, ಡಾ.ರಾಧಿಕಾ, ಡಾ.ಬಸವರಾಜ, ತಂಬಾಕು ನಿಯಂತ್ರಣ ಕೋಶದ ಸಂಯೋಜಕ ಮಹಾಂತೇಶ್.ಬಿ. ಉಳ್ಳಾಗಡ್ಡಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಅನುವಾದ ಕ್ರಿಯಾಶೀಲತೆಯನ್ನು ಬೇಡುವ ಕೆಲಸ : ದಳವಾಯಿ

**ಮೂರನೇ ಪುಟದಿಂದ**

ಸಿ. ವೆಂಕಟೇಶ್ ಮಾತನಾಡಿ ಪ್ರೊ.ಮೋಹನ ಕುಂಟಾರ್ ಅವರದು ಬಹುಮುಖ ವ್ಯಕ್ತಿತ್ವ. ಸಾಹಿತ್ಯ, ಅನುವಾದ, ಯಕ್ಷಗಾನ ಹೀಗೆ ಹಲವು ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕನ್ನಡ ಮತ್ತು ಮಲೆಯಾಳಂ ಅನುವಾದ ಸಾಹಿತ್ಯದ ಕೊಂಡಿಯಾಗಿ ಅವರು ಕಾರ್ಯನಿರ್ವಹಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಯಾಜಿ ಪ್ರಕಾಶನವು ಪ್ರಕಟಿಸಿದ್ದ ಅನುವಾದದ ಹೆಜ್ಜೆಗುರುತುಗಳು ಪುಸ್ತಕವನ್ನು ಬಿಡುಗಡೆ ಗೊಳಿಸಲಾಯಿತು ಮತ್ತು ಪ್ರೊ. ಮೋಹನ ಕುಂಟಾರ್ ದತ್ತಿನಿಧಿಯನ್ನು ಉದ್ಘಾಟಿಸಲಾಯಿತು. ಪ್ರೊ. ಮೋಹನ ಕುಂಟಾರ್ ದತ್ತಿನಿಧಿ ಸ್ಥಾಪಕರಾದ ಡಾ.ಸೌಮ್ಯಲತಾ ಪಿ., ಧಾರವಾಡದ ವಿಶ್ವನಾಥ ನಾಗರಣ, ವಿವಿಧ ವಿಭಾಗಗಳ ಮುಖ್ಯಸ್ಥರು, ನಿಕಾಯಗಳ ಡೀನರು, ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.

For Events Ads
& News Coverage
Contact:
94486 33038